ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 27-02-2026

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಒಂದು ಡಿಸ್ಚಾರ್ಜ್ ಸಮ್ಮರಿಯ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-15 ಎಂದು ಗುರುತಿಸಲಾಯಿತು. ಒಂದು ವೈಧ್ಯಕೀಯ ರಶೀದಿ ಹಾಜರುಪಡಿಸಿರುತ್ತೇನೆ. ಅದಕ್ಕೆ ಲಗತ್ತಿಸಿದ 9 ವೈಧ್ಯಕೀಯ ವೆಚ್ಚ ರಶೀದಿಗಳನ್ನು ಹಾಜರುಪಡಿಸಿದ್ದು, ಸದ್ರಿ 9 ವೈಧ್ಯಕೀಯ ವೆಚ್ಚದ ರಶೀದಿಗಳಲ್ಲಿರುವ ಮೊತ್ತ ಒಟ್ಟು ರೂ.9950/- ಇದ್ದು ಆದ್ದರಿಂದ ಸದ್ರಿ ದಾಖಲೆಗಳನ್ನು ಒಟ್ಟಾಗಿ ನಿಪಿ-16 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ ಬಿಲ್ ಪ್ರತಿ ಮತ್ತು ಇನ್ನೊಂದು ರಶೀದಿ ಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-17 ಮತ್ತು ನಿಪಿ-18 ಎಂದು ಗುರುತಿಸಲಾಯಿತು. ಒಂದು ಎಕ್ಸರೇ ತೆಗೆದ ರಶೀದಿಯನ್ನು ಹಾಜರುಪಡಿಸಿರತ್ತೇನೆ. ಸದ್ರಿ ಎದುರದಾರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ ಏಕೆಂದರೆ ಸದ್ರಿ ವೆಚ್ಚದ ಹಣ ನಿಪಿ-17 ರಲ್ಲಿ ತೋರಿಸಲಾಗಿದೆ ಎಂದು ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-18 ಎಂದು ಗುರುತಿಸಲಾಯಿತು. ಒಂದು ವಾಹನ ಹಾನಿ ಎಸ್ಟಿಮೇಶನ್ ಕೊಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-19 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ಸದ್ರಿ ದಿನ ನಾನೇ ವಾಹನವನ್ನು ಚಾಲನೆ ಮಾಡುತ್ತಿದ್ದೆನು. ಸದ್ರಿ ಮೋಟರ ಬೈಕ್ ನನ್ನ ಹೆಸರಿನಲ್ಲಿರುತ್ತದೆ. ನನ್ನ ವಾಹನಕ್ಕೆ ಯಾವ ವಿಮಾ ಕಂಪನಿಯಿಂದ ವಿಮೆ ಮಾಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ವಾಹನ ಚಾಲನೆ ಮಾಡುವ ಸದ್ರಿ ಅಪಘಾತದ ದಿನ ನನಗೆ ವಾಹನ ಚಾಲನಾ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ.

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ನಿಖರವಾದ ಜನ್ಮ ದಿನಾಂಕ ತೋರಿಸಲು ನನ್ನ ಬಳಿ ನನ್ನ ಶಾಲಾ ದಾಖಲೆಗಳು ಇರುತ್ತವೆ. ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಅಪಘಾತದ ದಿನ ನನಗೆ

40 ವರ್ಷ ವಯಸ್ಸಿಗಿಂತ ಹೆಚ್ಚಾಗಿತ್ತು, ಶಾಲಾ ದಾಖಲೆ ಹಾಜರುಪಡಿಸಿದರೆ ನನ್ನ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳ ಭಟ್ಕಳದಿಂದ 15 ಕಿಲೋಮೀಟರ ದೂರದಲ್ಲಿರುತ್ತದೆ. ನನ್ನ ಬೈಕಿನ ಬಲಬದಿಯ ಭಾಗದಲ್ಲಿ ಡಿಕ್ಕಿಹೊಡೆಸಿದ್ದಕ್ಕೆ ಹಾನಿಯಾಗಿರುತ್ತದೆ. 1 ನೇ ಎದುರುದಾರನ ಅಟೋ ಚಾಲಕ ತನ್ನ ಬದಿಯಿಂದ ನಿಧಾನವಾಗಿ ಬರುತ್ತಿದ್ದ, ನಾನೇ ವೇಗವಾಗಿ ಹೋಗಿ ಅಟೋ ರಿಕ್ಷಾಗೆ ಡಿಕ್ಕಿಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವುದರಿಂದ 2 ನೇ ಎದುರುದಾರ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ನಾನು ಮೇಸ್ತ್ರಿ ಕೆಲಸ ಮತ್ತು ಕೃಷಿ ಕೆಲಸ ಮಾಡುತ್ತಿದ್ದೆ, ಅದರಿಂದ ತಿಂಗಳಿಗೆ ರೂ.32,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಅಂಗನ್ಯೂನ್ಯತೆ ಉಂಟಾಗಿದೆ, ಮೊದಲಿನಂತೆ ಈಗ ಕೆಲಸ ಮಾಡಲು ಆಗುವುದಿಲ್ಲ ಎಂದು ಮತ್ತು ನನ್ನ ಆದಾಯದಲ್ಲಿ ಕುಂಟಿತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯರ ಮೇಲೆ ಪ್ರಭಾವ ಬೀರಿ ಹೆಚ್ಚು ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಔಷಧೋಪಚಾರ, ಪ್ರಯಾಣ ಮತ್ತು ಚಿಕಿತ್ಸೆಗಾಗಿ ಮತ್ತು ನನ್ನನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಕ ಮಾಡಿಕೊಂಡು ಸಾಕಷ್ಟು ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನಕ್ ರಿಪೇರಿಗೆ ರೂ.15,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾಹನದ ವಿಮಾ ಮಾಡಿಸಿದ ಕಂಪನಿಯಿಂದ ವಾಹನ ರಿಪೇರಿ ಖರ್ಚನ್ನು ಈಗಾಗಲೇ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ವಾಹನದ ವಿಮಾ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ರಿಕ್ಷಾ ಚಾಲಕನಿಗೆ ಡಿ ಎಲ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ರಿಕ್ಷಾಗೆ ಫಿಟನೆಸ್ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ರಿಕ್ಷಾ ಚಾಲಕ ತನ್ನ ಕಾರ್ಯವ್ಯಾಪ್ತಿಯನ್ನು ಬಿಟ್ಟು

ಬೇರೆ ಸ್ಥಳಕ್ಕೆ ಹೋಗಿ ಅಪಘಾತಪಡಿಸಿರುವುದರಿಂದ 2 ನೇ ಎದುರುದಾರ ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಡಿ ಎಮ್ ಎಸ್ ವಕೀಲರಿಂದಃ–**

1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪರ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**